**ದಿಃ 19.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳನ್ನು ನಾನು ಓದಿ ನೋಡಿರುತ್ತೇನೆ. ಮತ್ತು ನನ್ನ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ.

ನಮ್ಮ ಸಂಸ್ಥೆ ನನ್ನ ಹೆಸರಿಗೆ ನೀಡಿರುವ Authorization Letter ನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಆರ್.1 ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲು- ಅರ್ಜಿದಾರರ ಪರ ವಕೀಲರಿಂದ ಃ**

ಅಪಘಾತಕ್ಕೆ ಸಂಬಂಧಪಟ್ಟಂತೆ ನಮ್ಮ ಸಂಸ್ಥೆಯಲ್ಲಿ Investigating Officer ಇರುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆಯಲು Investigating Officer ಎಂದು ನೇಮಕ ಮಾಡಿಕೊಂಡಿರುತ್ತಾರೆ. ಅವರು ಪೊಲೀಸ್ ಠಾಣೆಗೆ ಹೋಗಿ ದಾಖಲಾತಿಗಳನ್ನು ತರುತ್ತಾರೆ ಎನ್ನುವುದು ಸರಿ. ಆದರೆ ಎದುರುದಾರರ ಮನೆಗಳ ವಿಳಾಸಕ್ಕೆ ಹೋಗಿ ವಿಚಾರಿಸಿಕೊಡು ಬರುತ್ತಾರೆ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಅಪಘಾತಕ್ಕೆ ಒಳಪಟ್ಟ ವಾಹನ ಸಂಖ್ಯೆ ಕೆಎ 13 ಡಿ 0800 ನಮ್ಮ ಸಂಸ್ಥೆಯ ವಿಮೆಗೆ ಒಳಪಟ್ಟಿತ್ತು ಎನ್ನುವುದು ಸ ರಿಯಲ್ಲ. ನಮ್ಮ ಸಂಸ್ಥೆಯಿಂದ ಈ ವಾಹನಕ್ಕೆ ವಿಮೆ ಮಾಡಿರುವುದಿಲ್ಲ. ಈ ವಾಹನ ಅಪಘಾತಕ್ಕೆ ಒಳಪಟ್ಟ ಸಮಯದಲ್ಲಿ ನಮ್ಮ ಸಂಸ್ಥೆಯ ವಿಮೆಗೆ ಒಳಪಟ್ಟಿರಲಿಲ್ಲ. ನಮ್ಮ ಸಂಸ್ಥೆಯ ವಿಮೆಗೆ ಒಳಪಡದೇ ಇರುವುದರಿಂದ, ವಿಮಾ ಪಾಲಿಸಿಯನ್ನು ಹಾಜರುಪಡಿಸುವ ಪ್ರಶ್ನೆಯೇ ಬರುವುದಿಲ್ಲ. ಈ ವಾಹನ ನಮ್ಮ ಸಂಸ್ಥೆಯ ವಿಮೆಗೆ ಒಳಪಟ್ಟಿರುತ್ತದೆ ಎನ್ನುವುದು ಸರಿಯಲ್ಲ. ಈ ವಿಷಯ ನನಗೆ ಗೊತ್ತು ಎನ್ನುವುದು ಸರಿಯಲ್ಲ. ಆದರೂ ಈ ಬಗ್ಗೆ ಸುಳ್ಳು ಹೆಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರು ದೋಷಾರೋಪಣಾ ಪಟ್ಟಿಯಲ್ಲಿ ಸದರಿ ವಾಹನದ ಮಾಲೀಕ ವಾಹನವನ್ನು ವಿಮೆಗೆ ಒಳಪಡಿಸಿರಲಿಲ್ಲ ಎಂದು ಸಲ್ಲಿಸಿರುವುದರಿಂದ, ಅದರ ಪ್ರಯೋಜನವನ್ನು ಪಡೆದುಕೊಳ್ಳುವ ಸಲುವಾಗಿ ಸದರಿ ವಾಹನ ವಿಮೆಗೆ ಒಳಪಟ್ಟಿರಲಿಲ್ಲ ಎಂದು ಸುಳ್ಳು ಹೇಳುತಿತದ್ದೇನೆ ಎನ್ನುವುದ ಸರಿಯಲ್ಲ.

**RW**-1

ಮೃತ ಅರ್ಜುನ 1 ನೇ ಎದುರುದಾರ ಬಳಿ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ.ಈ ವಿಷಯ ನನಗೆ ಗೊತ್ತು ಎನ್ನುವುದು ಸ ರಿಯಲ್ಲ. ಆದರೂ ಸಹ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಎದುರುದಾರರ ಆದೇಶದ ಮೇರೆಗೆ ಮೃತ ಅರ್ಜುನ ಆ ದಿನ ಲೋಡ್ ತರಲು ಹೋಗುತ್ತಿದ್ದರು ಎನ್ನುವುದು ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸ ರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮತ್ತು
ಎಮ್.ಎ.ಸಿ.ಟಿ.ಮೈಸೂರು

**.03.2021 ರಂದು ಆದ ಆದೇಶದ ಮೇರೆಗೆ**
**ಸಾಕ್ಷಿಯನ್ನು ದಿಃ 16.03.2021 ಪುನಃ ಕರೆಯಿಸಿ**
**ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ– ಅರ್ಜಿ ದಾರರ ಪರ ಶ್ರೀ ಎಂ. ಪಿ. ಪಿ. ವಕೀಲರಿಂದ**

ನನ್ನ ವೇತನ ಪ್ರಮಾಣಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–8 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ.ಮೈಸೂರು

**ಸಾಕ್ಷಿಯನ್ನು ದಿಃ 17.03.2021 ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀಸವಾಲುಃ ಶ್ರೀ ಜೆ.ಎಸ್.ಕೆ ವಕೀಲರಿಂದ.**

ನನಗೆ ಬ್ಯಾಂಕ್ ಖಾತೆ ಇರುತ್ತದೆ. ನನ್ನ ಸಂಬಳವು ನನ್ನ ಬ್ಯಾಂಕ್ ಆಫ್ ಬರೋಡದಲ್ಲಿರುವ ಬ್ಯಾಂಕ್ ಖಾತೆಗೆ ಜಮಾವಾಗುತ್ತದೆ. ನಿಪಿ–8 ನ್ನು ಮೊದಲೇ ಹಾಜರು ಪಡಿಸಲು ತೊಂದರೆ ಇರಲಿಲ್ಲ. ನಾನು ಒಳರೋಗಿಯಾಗಿ ಒಂದೂವರೆ ದಿನ ಮಾತ್ರ ಇದ್ದೆನು. ನಿಪಿ–8 ನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

**RW**-1

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ.ಮೈಸೂರು